ತೀರ್ಥಹಳ್ಳಿ ತಾಲ್ಲೂಕಿನಲ್ಲಿ ರೈತರ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ

1777 (2540) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ತೀರ್ಥಹಳ್ಳಿ ತಾಲ್ಲೂಕಿನಲ್ಲಿ ರೈತರ ನೀರಾವರಿ ಪಂಪುಸೆಟ್ಟುಗಳಿಗೆ 1990 ರಿಂದ ಇದುವರೆಗೆ ವಿದ್ಯುತ್ ಸಂಪರ್ಕ ಒದಗಿಸಲು ಒಟ್ಟು ಎಷ್ಟು ಜನರಿಗೆ ಮಂಜೂರಾತಿ ನೀಡಿದೆ;

(ಆ) ಇದರಲ್ಲಿ ಎಷ್ಟನೇ ದಿನಾಂಕದ ಮಂಜೂರಾತಿಯವರೆಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ;

(ಇ) ಇಲಾಖೆ ಮಂಜೂರಾತಿ ನೀಡಿದ ಹಿನ್ನಲೆಯಲ್ಲಿ ಬ್ಯಾಂಕ್ ಸಾಲ ಮಾಡಿಪಂಪ್ ಖರೀದಿಸಿ ವಿದ್ಯುತ್ ಸಂಪರ್ಕ ನೀಡದೇ ರೈತರು ಬಡ್ಡಿ ಕಟ್ಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

(ಈ) ಈ ವಿಳಂಬಕ್ಕೆ ಕಾರಣವೇನು? ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ವೀರಕುಮಾರ ಪಾಟೀಲ್ (ಮಾನ್ಯ ಇಂಧನ ರಾಜ್ಯ ಸಚಿವರು)

(ಅ) ತೀರ್ಥಹಳ್ಳಿ ತಾಲ್ಲೂಕಿನಲ್ಲಿ 1990 ರಿಂದ ಇದುವರೆವಿಗೂ ಒಟ್ಟು 1,634 ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಮಂಜೂರಾತಿ ನೀಡಲಾಗಿದೆ.

(ಆ) 1993 ಜೂನ್ ತಿಂಗಳವರೆಗೆ ಮಂಜೂರಾತಿಗೊಂಡಿರುವ 1,409 ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ.

(ಇಈ) ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣದಲ್ಲಿ ವಿಳಂಬವಾಗುತ್ತಿರುವ ಸರ್ಕಾರದ ಗಮನಕ್ಕೆ ಬಂದಿದೆ.

ಮಂಡಳಿಯ ಉಪ-ವಿಭಾಗ ಕಛೇರಿಯಲ್ಲಿ ಅರ್ಜಿ ನೊಂದಾಯಿಸಿ, ಅಗತ್ಯವಾದ ನಿಯಮಗಳನ್ನು ಪಾಲಿಸಿದ ಅರ್ಜಿದಾರರಿಗೆ ಕಾರ್ಯಾದೇಶ ನೀಡಲಾಗುತ್ತದೆ. ಹೀಗೆ ಕಾರ್ಯಾದೇಶ ಪಡೆದ ಅರ್ಜಿಗಳನ್ನು ಕಾರ್ಯಾದೇಶದ ಸಂಖ್ಯೆ ಹಾಗೂ ದಿನಾಂಕವನ್ನು ಅನುಸರಿಸಿ ವಿವಿಧ ಪ್ರವರ್ಗಗಳನ್ನಾಗಿ ಅಂದರೆ ಪರಿಶಿಷ್ಟ ಜಾತಿ, ಪಂಗಡ, ನೂರುಬಿವಿ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಕೇವಲ ಸರ್ವೀಸ್ ಕನ್‌ಕ್ಷನ್ ಕೆಲಸಗಳು, ಭೂ ಅಭಿವೃದ್ಧಿ ಬ್ಯಾಂಕ್ ಫಲಾನುಭವಿಗಳು. ಏತ, ನೀರಾವರಿ ಯೋಜನೆಗಳು ಸಾಮಾನ್ಯ ವರ್ಗಗಳು ಹೀಗೆ ವಿಂಗಡಿಸಿ ಆಯಾ ಪ್ರವರ್ಗಗಳಲ್ಲಿ ಜ್ಯೇಷ್ಟತೆಯನ್ನು ನಿಗಧಿಪಡಿಸಲಾಗುತ್ತದೆ. ಜ್ಯೇಷ್ಟತೆಯನ್ನು ನಿಗಧಿ ಪಡಿಸಿದ ನಂತರ ಆದ್ಯತಾಪಟ್ಟಿಯಲ್ಲಿನ ಜ್ಯೇಷ್ಠತೆಗೆ ಅನುಸಾರವಾಗಿ ವಿದ್ಯುದೀಕರಣ ಕಾರ್ಯವನ್ನು ನಿರ್ವಹಿಸಲಾಗುವುದು. ಅಲ್ಲದೇ ಪ್ರತಿ ತಾಲ್ಲೂಕಿಗೆ ಗುರಿಯನ್ನು ನಿಗಧಿಪಡಿಸಿ, ಅದಕ್ಕೆ ತಕ್ಕಂತೆ ವಿದ್ಯುದೀಕರಣ ಮಾಡಲಾಗುತ್ತದೆ. ಈ ಕಾರಣಗಳಿಂದ ವಿಳಂಬವಾಗುವುದು ಸಹಜ.